ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ

ಬೆಂಗಳೂರು – 560001

ಸಂಖ್ಯೆ: ಸಿ7(8)ಪ್ರಾ.ಶಿ.ಅ/ಆರ್.ಟಿ.ಇ/ದಾಖಲಾತಿ/473/2015-16 ದಿನಾಂಕ: 27.06.2016

# ಸುತ್ತೋಲೆ

ವಿಷಯ:- ಶಿಕ್ಷಣ ಹಕ್ಕು ಕಾಯಿದೆ ಅಡಿ ಉಳಿದಿರುವ ಸೀಟುಗಳ ಹಂಚಿಕೆ ಕುರಿತು.

ಉಲ್ಲೇಖ:- 1. ಈ ಕಛೇರಿಯ ಜ್ಞಾಪನದ ಸಮಸಂಖ್ಯೆ ದಿನಾಂಕ: 07-05-2016.
2. ಈ ಕಛೇರಿಯ ಸುತ್ತೋಲೆಯ ಸಮ ಸಂಖ್ಯೆ ದಿನಾಂಕ:17-05-2016.
3. ಈ ಕಛೇರಿಯ ಸುತ್ತೋಲೆಯ ಸಮ ಸಂಖ್ಯೆ ದಿನಾಂಕ:18-05-2016.
4. ಈ ಕಛೇರಿಯ ಸುತ್ತೋಲೆಯ ಸಮ ಸಂಖ್ಯೆ ದಿನಾಂಕ:23-05-2016.
5. ಈ ಕಛೇರಿಯ ಸುತ್ತೋಲೆಯ ಸಮ ಸಂಖ್ಯೆ ದಿನಾಂಕ:25-05-2016.
6. ಈ ಕಛೇರಿಯ ಸುತ್ತೋಲೆಯ ಸಮ ಸಂಖ್ಯೆ ದಿನಾಂಕ:13-06-2016.

.*********

2016-17ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ 115237 ಸೀಟುಗಳು ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಲಭ್ಯವಿವೆ. ಇವುಗಳ ಪೈಕಿ ಆನ್‌ಲೈನ್ ತಂತ್ರಾಂಶದ ಮೂಲಕ ದಿನಾಂಕ: 07.05.2016 ರಂದು ಮೊದಲ ಸುತ್ತಿನ ಲಾಟರಿ ಪ್ರಕ್ರಿಯೆಯಲ್ಲಿ 101345 ಸೀಟುಗಳ ಹಂಚಿಕೆ ಮಾಡಲಾಗಿದೆ. ಅವುಗಳ ಪೈಕಿ 78546 ಸೀಟುಗಳಿಗೆ ಮಕ್ಕಳ ದಾಖಲಾತಿ ಮಾಡಲಾಗಿದೆ. ಸೀಟು ಹಂಚಿಕೆ ಮಾಡಿದ ನಂತರ ಉಳಿದ 22799 ಸೀಟುಗಳ ಪೈಕಿ 2ನೇ ಸುತ್ತಿನಲ್ಲಿ 16802 ಸೀಟುಗಳನ್ನು ಹಂಚಿಕೆ ಮಾಡಲಾಗಿದೆ. ಇದರಲ್ಲಿ 9696 ಮಕ್ಕಳಿಗೆ ದಾಖಲಾತಿ ಆಗಿದೆ. ಒಟ್ಟಾರೆ ಆರ್.ಟಿ.ಇ ಅಡಿ ಮೀಸಲಿಟ್ಟಿದ್ದ 115237 ಸೀಟುಗಳ ಪೈಕಿ ದಿನಾಂಕ: 28.06.2016 ರಲ್ಲಿ ಇದ್ದಂತೆ 88242 ಸೀಟುಗಳಿಗೆ ದಾಖಲಾತಿ ಆಗಿದ್ದು ಇನ್ನೂ 26995 ಸೀಟುಗಳು ಉಳಿದಿವೆ.

ಮೊದಲ ಮತ್ತು ಎರಡನೇ ಸುತ್ತಿನ ಲಾಟರಿ ಪ್ರಕ್ರಿಯೆಯಲ್ಲಿ ಸೀಟು ಹಂಚಿಕೆಯಾಗಿ ವಾಸ ಸ್ಥಳದಿಂದ ಶಾಲೆಗೆ ಇರುವ ದೂರದ ಕಾರಣ ಮತ್ತು ವಾರ್ಡ್ ಹೊರಗಡೆ ಇರುವ ಕಾರಣ ತಿರಸ್ಕರಿಸಲಾದ ಅರ್ಜಿಗಳ ಸಂಖ್ಯೆ 9775 ಆಗಿದೆ.

ಆರ್.ಟಿ.ಇ ಅಡಿ ಖಾಲಿ ಉಳಿದಿರುವ ಸೀಟುಗಳಿಗೆ ತೀರಾ ಅಗತ್ಯವಿರುವ ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಅಲ್ಪಸಂಖ್ಯಾತವಲ್ಲದ ಅನುದಾನ ರಹಿತ ಶಾಲೆಗಳಲ್ಲಿ 2016-17ನೇ ಸಾಲಿನಲ್ಲಿ ಪ್ರವೇಶ ಪಡೆಯಲು ಅನುಕೂಲವಾಗುವಂತೆ ಈ ಕೆಳಕಾಣಿಸಿದಂತೆ ಮತ್ತೊಂದು ಅವಕಾಶ ಮಾಡಿಕೊಡಲಾಗಿದೆ.

ಆಯಾ ಜಿಲ್ಲೆಗಳಲ್ಲಿ ಶಾಲಾವಾರು ಉಳಿದಿರುವ ಸೀಟುಗಳ ಮಾಹಿತಿ(ಮೀಸಲಾತಿ ಸಹಿತ)ಯನ್ನು ಆಯಾ ಜಿಲ್ಲಾಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರುಗಳಿಗೆ ದಿನಾಂಕ:29-06-2016 ರೊಳಗೆ ಇ-ಮೇಲ್ ಮುಖಾಂತರ ನೀಡಲಾಗುವುದು. ಈ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಹಂತದಲ್ಲಿ ಪರಿಶೀಲಿಸಿ, ಧೃಢೀಕರಿಸಿ ದಿನಾಂಕ:30-06-2016 ರಂದು ಜಿಲ್ಲಾಮಟ್ಟದ ಸಮಿತಿಗೆ ಸಲ್ಲಿಸುವುದು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಸಮಿತಿಯು ಈ ಕೆಳಕಾಣಿಸಿದ ಮಾರ್ಗಸೂಚಿಯಂತೆ ಆರ್.ಟಿ.ಇ ಅಡಿ ಖಾಲಿ ಇರುವ ಸೀಟುಗಳಿಗೆ ಪ್ರವೇಶ ಪ್ರಕ್ರಿಯೆ ನಡೆಸಲು ಅನುಮತಿ ನೀಡಲಾಗಿದೆ.

1. ಮೊದಲ ಮತ್ತು ಎರಡನೇ ಸುತ್ತಿನ ಲಾಟರಿ ಪ್ರಕ್ರಿಯೆಯಲ್ಲಿ ಸೀಟು ಹಂಚಿಕೆಯಾಗಿದ್ದು, ವಾಸಸ್ಥಳದಿಂದ ಶಾಲೆಗೆ ಇರುವ ಅಂತರದ ಕಾರಣ ಅಥವಾ ವಾರ್ಡ್ ಹೊರಭಾಗದಲ್ಲಿರುವ ಕಾರಣ, ಅಥವಾ ಗ್ರಾಮೀಣ ಪ್ರದೇಶದಿಂದ ಪಟ್ಟಣ ಪ್ರದೇಶಕ್ಕೆ ಅರ್ಜಿ ಸಲ್ಲಿಸಿದ್ದ ಕಾರಣ ತಿರಸ್ಕರಿಸಲ್ಪಟ್ಟಿದ್ದಲ್ಲಿ, ದೂರದ ಅಂತರವನ್ನು ಸಡಿಲಿಸಿ, ಸೀಟು ಹಂಚಿಕೆಯಾದ ಶಾಲೆಯಲ್ಲಿ ಸೀಟು ಖಾಲಿ ಇದ್ದಲ್ಲಿ ಭರ್ತಿಮಾಡುವುದು.
2. ಒಂದು ವೇಳೆ ಸೀಟು ಹಂಚಿಕೆಯಾದ ಶಾಲೆಗಳಲ್ಲಿ 2ನೇ ಸುತ್ತಿನ ಲಾಟರಿ ಪ್ರಕ್ರಿಯೆಯ ನಂತರ ಆರ್.ಟಿ.ಇ ಅಡಿ ಮೀಸಲಿಟ್ಟಿದ್ದ ಎಲ್ಲಾ ಸೀಟುಗಳು ಭರ್ತಿಯಾಗಿದ್ದಲ್ಲಿ ಅಂತಹ ಮಕ್ಕಳು ಅರ್ಜಿಯಲ್ಲಿ ಬೇರೆ ಶಾಲೆಗಳಿಗೆ ನೀಡಿರುವ ಆದ್ಯತೆ ಪರಿಗಣಿಸಿ ಅಂತಹ ಶಾಲೆಗಳಲ್ಲಿ ಸೀಟುಗಳು ಖಾಲಿ ಇದ್ದಲ್ಲಿ ಮೊದಲ ಆದ್ಯತೆ ಮೇಲೆ ಸೀಟು ಹಂಚಿಕೆ ಮಾಡುವುದು.
3. ಅರ್ಹತಾ ಪಟ್ಟಿಯಲ್ಲಿ ಮಗುವಿನ ಹೆಸರು ಸೇರಿದ್ದು, ಲಾಟರಿ ಪ್ರಕ್ರಿಯೆಯಲ್ಲಿ ಸೀಟು ಹಂಚಿಕೆಯಾಗದ ತೀರಾ ಬಡತನದ ಕುಟುಂಬದ ಅರ್ಹ ಮಕ್ಕಳಿಗೆ ಆರ್.ಟಿ.ಇ ಅಡಿ ಆದ್ಯತೆ ನೀಡಿ ಖಾಲಿ ಉಳಿದಿರುವ ಸೀಟುಗಳಿಗೆ ಜಿಲ್ಲಾ ಸಮಿತಿಯ ಸಮ್ಮುಖದಲ್ಲಿ ಲಾಟರಿ ಮೂಲಕ ಸೀಟು ಹಂಚಿಕೆ ಮಾಡುವುದು.
4. ಸೀಟು ಹಂಚಿಕೆಯ ಪ್ರಕ್ರಿಯೆಯನ್ನು ದಿನಾಂಕ:02-07-2016 ರೊಳಗೆ ಜಿಲ್ಲಾ ಸಮಿತಿಯು ಪೂರ್ಣಗೊಳಿಸಿ ದಿನಾಂಕ:08-07-2016 ರೊಳಗೆ ಸಂಬಂಧಿಸಿದ ಮಕ್ಕಳು ಸೀಟು ಹಂಚಿಕೆಯಾದ ಶಾಲೆಯಲ್ಲಿ ಪ್ರವೇಶ ಪಡೆಯಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಂಬಂಧಿಸಿದ ಶಾಲಾ ಮುಖ್ಯಸ್ಥರು ಕ್ರಮ ತೆಗೆದುಕೊಳ್ಳುವುದು. ಆರ್.ಟಿ.ಇ.ಅಡಿ ದಾಖಲಾದ ಮಕ್ಕಳ ಮಾಹಿತಿಯನ್ನು ತಂತ್ರಾಂಶದ ಮೂಲಕ ಆಯಾ ದಿನವೇ ಅಪ್‌ಡೇಟ್ ಮಾಡಲು ಸೂಕ್ತ ಕ್ರಮತೆಗೆದು ಕೊಳ್ಳಲು ತಿಳಿಸಿದೆ.

(ಡಾ॥ ಪಿ.ಸಿ. ಜಾಫರ್, ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ರವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ.
3. ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಸೆಂಟರ್, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಶಿಕ್ಷಣ ನಿಯಂತ್ರಣಾ ಪ್ರಾಧಿಕಾರ.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
5. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
6. ಅಪರ ಆಯುಕ್ತರು, ಜಂಟಿ ನಿರ್ದೇಶಕರು, ಧಾರವಾಡ ಮತ್ತು ಗುಲ್ಬರ್ಗಾ.
7. ಎಲ್ಲಾ ನಗರ ಸಭೆಗಳ ಆಯುಕ್ತರು.
8. ಎಲ್ಲಾ ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳು.
9. ಕಛೇರಿ ಪ್ರತಿ.